ಚಿಲ್ಲರೆಯನ್ನು ಒಳಗೆ ಹಾಕುವವರೆಗೂ ಮುಚ್ಚದೆ ಇಟ್ಟಿದ್ದೆನು. ಒಳಗೆ ಏನೆಲ್ಲಾ ಇರುವುದೆಂದು ನೋಡಲು ಆಸೆ. ಆ ಅಂದವಾದ ಕರ್ಚೀಫ್. ಇನ್ನೂ... ಎಂದು ನೋಡಲು ತೊಡಗಿದಾಗ, ಕಂಡಕ್ಟರ್ 'ಚಿಲ್ಲರೆ ಇಲ್ಲವೇ? ಎಂದು ಸಿಡುಕಿನಲ್ಲಿ ಕೇಳಿದರು. 'ಇಲ್ಲ' ಎಂದ ಶೆಂಬಾಯಿಅಪ್ಪತ್ತಾರನ್ನು ಕಂಡಕ್ಟರ್ ನೋಡಿದರು. ಕೋಪ ಇಲ್ಲ. ಕೋಪ ತಗ್ಗಿ ಮುಖದಲ್ಲಿ ನಗು ಅರಳಿದಂತೆ ನೆನಪು. ಚಿಲ್ಲರೆಯನ್ನು ಟಿಕೆಟನ್ನು ಅವರ ಕಡೆಗೆ ನೀಡಿದರು ಕಂಡಕ್ಟರ್. ಅದನ್ನು ತಡೆದು ನಾನು ತೆಗೆದುಕೊಂಡಾಗ ಅವರಿಗೆ ಸ್ವಲ್ಪ ನಿರಾಶೆಯಾಗಿರಬಹುದು. 'ಟಿಕೆಟ್ ಟಿಕೆಟ್' ಎಂದು ಅವರು ಕೂಗಿದ ದನಿಯಲ್ಲಿ ಅದು ತಿಳಿಯಿತು.

ಹಾಗೂ ಹೀಗೂ ಥಿಯೇಟರಿನಲ್ಲೂ ಟಿಕೆಟ್ ತೆಗೆದುಕೊಂಡು ಒಳಗೆ ಹೋದೆವು. ಅದು ಬಾಲ್ಕನಿ ಟಿಕೆಟ್. ಅಮ್ಮನೊಂದಿಗೂ ಅತ್ತೆಯೊಂದಿಗೂ ಸಿನಿಮಾ ನೋಡಲು ಬರುವಾಗ ಹೆಂಗಸರಿಗಾಗಿ ಇರುವ ಬೆಂಚ್ ಟಿಕೆಟ್ ತೆಗೆದುಕೊಂಡು ಹೋದಾಗ ಯಾವಾಗ ಸಿನಿಮಾ ಶುರುಮಾಡುತ್ತಾರೆ ಎಂದು ಪ್ರೊಜೆಕ್ಟರ್ ಇರುವ ಕಡೆಗೆ ತಿರುಗಿದಾಗ ನೋಡಿದಾಗ ಕಂಡಿದ್ದು ಬಾಲ್ಕನಿ. ಜನಗಳು ಅಲ್ಲೂ ಇರುವುದನ್ನು ನೋಡಿ, 'ಅಲ್ಲಿಗೆ ಹೋಗೋಣವೇ?' ಎಂದು ಕೇಳಿ 'ಕುಟ್ಟಿಸಿ' ಕೊಂಡಿದ್ದೆನು. 'ಅದು ರೂಪಾಯಿ ಕೊಟ್ಟು ಕೂರುವ ಜಾಗ, ನಮಗಲ್ಲ' ಎಂದು ಸರಸ್ವತಿ ಅತ್ತೆ ನನಗೆ ಹೇಳಿದ್ದರು. ಅದಕ್ಕೆ ಅವಕಾಶ ಹೀಗೆ ದೊರಕುವುದೆಂದು ತಿಳಿದಿರಲೇ ಇಲ್ಲ.

ಟಿಕೆಟ್ ಎಷ್ಟೆಂದು ತಿಳಿಯಲಿಲ್ಲ. ಯಾವ ಕ್ಯೂನಲ್ಲೂ ನಿಲ್ಲದೆ ಥಿಯೇಟರಿಗೆ ಎದುರಿಗಿದ್ದ ವಿಶೇಷ ಕೌಂಟರಿನಲ್ಲಿ ಹೋಗಿ ಸಣ್ಣ ಗೂಡಿನಲ್ಲಿ ಕೈನೀಡಿ ಕೊಂಡುಕೊಂಡ ಟಿಕೆಟ್. ನಂತರ ಒಬ್ಬ ಖಾಕಿ ಅಂಗಿ ತೊಟ್ಟ ವ್ಯಕ್ತಿ ಮರ್ಯಾದೆಯಿಂದ ಬಾಗಿಲು ತೆರೆದ. ಒಳಗೆ ಹೋದಾಗ ಅಲ್ಲಿತ್ತು ಮಹಡಿ ಹತ್ತುವ ದಾರಿ. ಆ ವ್ಯಕ್ತಿಗೂ ಶೆಂಬಾಯಿಅಪ್ಪತ್ತಾ ಗೊತ್ತಿರಬೇಕೆನೋ. ಅವರು ಪರಸ್ಪರ ನೋಡಿ ನಕ್ಕ ನಗುವಿನಿಂದ ತಿಳಿಯಿತು.

ಇದಕ್ಕೆ ಮೊದಲು ಥಿಯೇಟರಿನ ಮುಂಬಾಗಿಲಿನ ದಾರಿಯಲ್ಲಿ ನಾನು ಬಂದಿರಲಿಲ್ಲ. ರಸ್ತೆಯ ಮೂಲೆಯಿಂದ ಎರಡು ದೊಡ್ಡ ಓಣಿಯಂತೆ ಹಾದಿಗಳಿರುವುದು. ಎರಡೂ ಕಡೆಗಳಲ್ಲಿ ಗೂಡಿನಂತಿರುವುದು. ಒಂದು ಕಡೆ ಗಂಡಸರು ಟಿಕೆಟ್ ಕೊಳ್ಳಲು ಮತ್ತೊಂದು ಕಡೆ ಹೆಂಗಸರು ಟಿಕೆಟ್ ಕೊಳ್ಳಲು ಹೋಗುವ ದಾರಿಗಳು. ಬೆವರಿನ ನಾತವೂ, ಜನಗಳು ಬಿಡುವ ಹೂಸಿನ ಗಬ್ಬೂ ಸೇರಿ ತಲೆ ತಿರುಗುವಂತಾಗುವುದು. ಆ ಓಣಿಯಲ್ಲಿ ನುಸುಳಿ ಬರುವುದು ಸಿನಿಮಾ ನೋಡುವ ಆಸೆಯನ್ನೇ ಕೆಡಿಸಿಬಿಡುವುದು. ಹೊಡೆದಾಡಿಕೊಂಡು ಟಿಕೆಟ್ ಕೊಂಡು ಒಳಗೆ ಹೋಗುವಾಗ ಲುಂಗಿ ಉಟ್ಟ ರೌಡಿಯಂತಿರುವವನು ಟಿಕೆಟ್ ತೆಗೆದುಕೊಂಡು ಅರ್ಧ ಹರಿದುಕೊಡುವನು. ಬೀಡಿಯ ನಾತದೊಂದಿಗೆ ಅವನ ಕರ್ಕಶ ದನಿ, ದಾಡಿ ಮೀಸೆಯನ್ನು ನೋಡಿದರೆ ವಾಕರಿಕೆ ಬರುವಂತಿರುವುದು. ಎಲ್ಲಕ್ಕಿಂತ ವಿರಾಮ ಸಮಯದಲ್ಲಿ ಹೋಗಲೇ ಬಾರದ ಸಂಡಾಸು. ಇವುಗಳನ್ನೆಲ್ಲ ನೋಡಿಯೋ ಏನೋ ಅಮ್ಮನಿಗೆ ಥಿಯೇಟರಿಗೆ ಹೋಗುವುದು ಹಿಡಿಸದು. ಕೆಲಸಗಳಂತೂ ಇರುತ್ತಿದ್ದವು. ಬೇರೆ ಕಾರಣಗಳೂ ಇರಬಹುದು. ಅಪ್ಪ ಅಮ್ಮ ಜತೆಯಾಗಿ ಸಿನಿಮಾಗೆ ಹೋದದ್ದಿಲ್ಲ. ಹಾಗೆ ಹೋಗಬಾರದೆಂಬುದು ನಮ್ಮ ಮನೆಯ ಪದ್ಧತಿಯೋ ಏನೋ? ಅವುಗಳನ್ನೆಲ್ಲ ಈಗಿನಂತೆ ಅಂದು ಯೋಚಿಸಿರಲಿಲ್ಲ.

ಈ ರೀತಿಯಾದ ಯಾವ ತೊಂದರೆಗಳೂ ಇಲ್ಲದೆ ಮರ್ಯಾದೆಯೊಂದಿಗೆ ನೇರವಾಗಿ ಒಳಗೆ ಹೋಗಿ, ಮಹಡಿಯಲ್ಲಿ ಸೌಕರ್ಯವಾಗಿ ಕುಷನ್ ಸೀಟಿನಲ್ಲಿ ಕೂರುವುದು ಒಂದು ರೀತಿಯ ಸುಖವಾದ ಅನುಭವವೇ. ವೇಗವಾಗಿ ಶೆಂಬಾಯಿಅಪ್ಪತ್ತಾರೊಂದಿಗೆ ಒಳಗೆ ಹೋದೆ. ಶೆಂಬಾಯಿಅಪ್ಪತ್ತಾ ಯಾರಿಗೊ ಕಾಯುತ್ತಿರುವಂತೆ ಹಿಂಜರಿಯುತ್ತಲೇ ಒಳಗೆ ಬಂದರು. ತಮಗೆ